**ಸಾಕ್ಷಿಯನ್ನು ದಿ:26.03.2018 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ **ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದ:**

ಎರಡು ಇನ್ ಪೇಷಂಟ್ ಫೈಲ್‌ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-10 , ಔಟ್ ಪೇಷಂದಟ್ ಕರ್ಡನ್ನು ನಿಪಿ- 11 ಹಾಗೂ ಒಂದು ಸಿ ಟಿ ಸ್ಕ್ಯಾನ್ ಮತ್ತು 15 ಎಕ್ಸ್ ರೇ ಗಳನ್ನು ನಿಪಿ-12 ಎಂದು ಗುರುತಿಸಲಾಯಿತು.

ಪಾಟೀ ಸವಾಲು - ಎದುರುದಾರರ ಪರ ಶ್ರೀ ಆರ್ ಆರ್ ವಕೀಲರಿಂದ

ಅರ್ಜಿದಾರ ಈಗಲೂ ಸಹ ನಮ್ಮ ಆಸ್ಪತ್ರೆಯಲ್ಲಿ ಟೆಕ್‌ನೀಷಿಯನ್ ಆಗಿ ಕೆಲಸ ಮಾಡುತ್ತಿದ್ದಾರೆಂದರೆ ಸರಿ. ಅರ್ಜಿದಾರನಿಗೆ ಅಳವಡಿಸಿದ ಇನ್ ಪ್ಲಾಂಟ್ಸ್ ಗಳನ್ನು ತೆಗೆಯಲು ಮಾತ್ರ ಇನ್‌ಷ್ಯೂರೆನ್ಸ್ ಹಣ ಪಡೆದಿರುತ್ತಾನೆ. ಅರ್ಜಿದಾರ ಅನುಸರಣ ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ಒ ಪಿ ಡಿ ಕಾರ್ಡನ್ನು ಹಾಜರು ಪಡಿಸಿರುತ್ತೇನೆ. ಈ ಕೇಸಿಗೋಸ್ಕರ ಈಗ ಒ ಪಿ ಡಿ ಕಾರ್ಡನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-11 ರಲ್ಲಿರುವ ಎಲ್ಲಾ ಬರಹಗಳನ್ನು ಒಂದೇ ತರಹ ಬರೆದಿದ್ದೇನೆಂದರೆ ಸರಿಯಲ್ಲ. ಅರ್ಜಿದಾರ ನಮ್ಮ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದುದ್ದರಿಂದ ಆತನಿಗೆ ಸಹಾಯ ಮಾಡಲೆಂದು ನಿಪಿ-11 ನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆಂದರೆ ಸರಿಯಲ್ಲ. ಅರ್ಜಿದಾರ ಮೂಳೆ ಮುರಿತ ಕೂಡಿಕೊಂಡಿದೆ. ಅರ್ಜಿದಾರ ಮೊದಲು ಏನು ಕೆಲಸ ಮಾಡುತ್ತಿದ್ದನೋ ಅದೇ ಕೆಲಸದಲ್ಲಿ ಈಗಲೂ ಮುಂದುವರೆದಿದ್ದಾನೆ. ಅರ್ಜಿದಾರನ ಮೊದಲಿನಂತೆ ಕೆಲಸ ಮಾಡಲು ಅಪಘಾತದ ಗಾಯಗಳಿಂದ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಅರ್ಜಿದಾರನಿಗೆ ನಯಾವುದೇ ಅಂಗ ನ್ಯೂನತೆ ಇಲ್ಲ ದಿದ್ದರೂ ಸಹ ಆತನಿಗೆ ಸಹಾಯ ಮಾಡಲು ಯಾವುದೇ ಅಂಗನ್ಯೂನತೆ ಇರದೇ ಇದ್ದರೂ ಸಹ ಅಂದಾಜಿನ ಅಂಗನ್ಯೂನತೆಯ ಪ್ರಮಾಣ ಪತ್ರ ನಮೂದಿಸಿದ್ದೇನೆಂದರೆ ಸರಿಯಲ್ಲ ಅರ್ಜಿದಾರನ ಪರೋಕ್ಷವಾಗಿ ಪರೀಕ್ಷಿಸದೆ ಅಂದಾಜಿನ ಮೇಲೆ ಅಂಗನ್ಯೂನ್ಯತೆಯ ಪ್ರಮಾಣವನ್ನು ಪರೀಶೀಲಿಸಿದ್ದೇನೆಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಹೇಳಿದಷ್ಟು ಅರ್ಜಿದಾರನಿಗೆ ಅಂಗನ್ಯೂನತೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ -

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ,**

**ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು**
**ಮತ್ತು ಎಂ.ಎ.ಸಿ.ಟಿ., ಮೈಸೂರು.**